ಸೇತುವೆ ನಿರ್ಮಾಣದ ಬಗ್ಗೆ

೨೫ (೫೭) ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).—ಮಾನ್ಯ ಲೋಕೋಪಯೋಗಿ, ಆಚ್ಚು ಕಟ್ಟು ಪ್ರದೇಶ ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಜಮಖಂಡಿಯ ಲೋಕೋಪಯೋಗಿ ಉಪ ವಿಭಾಗದ ವ್ಯಾಪ್ತಿಯಲ್ಲಿ ಬರುವ ಟಕ್ಕಾಳಾ ಹಿರೇಪಡಸಲಗಳ ಮಧ್ಯೆ ಸೇತುವೆಯೊಂದನ್ನು ನಿರ್ಮಿಸುವ ಸಲಹೆ ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಅದಕ್ಕೆ ಸಂಬಂಧಿಸಿದಂತೆ ಕೈಕೊಂಡ ಪೂರ್ವಭಾವಿ ಕ್ರಮಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಸಚಿವರು).—

ಅ) ಬಂದಿದೆ.

ಆ) ಈ ಸೇತುವೆಯ ನಿರ್ಮಾಣಕ್ಕೆ ಸಮಾರು ೮ ಲಕ್ಷ ರೂಪಾಯಿಗಳು ಆಗುವುದು ಎಂದು ವರದಿಯಾಗಿದೆ. ಇದು ೧೯೮೬–೮೭ರ ಆಯವ್ಯಯದಲ್ಲಿ ಸೇರಿರುವುದಿಲ್ಲ. ಹಣದ ಲಭ್ಯತೆಯನ್ನಾಧರಿಸಿ, ಈ ಕಾಮಗಾರಿಯನ್ನು ಬರುವ ವರ್ಷಗಳಲ್ಲಿ ತೆಗೆದುಕೊಳ್ಳುವುದನ್ನು ಪರಿಶೀಲಿಸಲಾಗುವುದು.

ಸೇತು ಬಂಧನ ಕಾರ್ಯಕ್ರಮದ ಬಗ್ಗೆ

೨೬ (೬೦) ಶ್ರೀ ಬಾಬುರೆಡ್ಡಿ ತುಂಗಳ್ (ಬೀಳಗಿ).—ಮಾನ್ಯ ಲೋಕೋಪಯೋಗಿ, ಆಚ್ಚು ಕಟ್ಟು ಪ್ರದೇಶ ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ; —

ಅ) ೧೯೮೩–೮೪, ೧೯೮೪–೮೫ ಮತ್ತು ೧೯೮೫–೮೬ರಲ್ಲಿ ಬಿಜಾಪುರ ಹಾಗೂ ಬಾಗಲಕೋಟೆ ವಿಭಾಗಗಳಲ್ಲಿ ಸೇತು ಬಂಧನ ಕಾರ್ಯಕ್ರಮದ ಅಡಿಯಲ್ಲಿ ನಿರ್ಮಿಸಿದ ಸಣ್ಣ ಸೇತುವೆಗಳ ಸಂಖ್ಯೆ ಎಷ್ಟು? (ವಿವರ ನೀಡುವುದು)

ಆ) ಕಳೆದವರ್ಷ ನಿರ್ಮಾಣವಾದ ಮತ್ತು ನಿರ್ಮಾಣ ಹಂತದಲ್ಲಿರುವ ಸೇತುವೆಗಳ ಸಂಖ್ಯೆ ಎಷ್ಟು ?

ಇ) ಸದರೀ ನಿರ್ಮಾಣ ಕಾರ್ಯಗಳಿಗಾಗಿ ಸರ್ಕಾರದವರು ಇದುವರೆಗೆ ವೆಚ್ಚಮಾಡಿದ ಹಣವೆಷ್ಟು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡುವ ಮತ್ತು ನೀರಾವರಿ ಮಂತ್ರಿಗಳು).—

ಅ)	ಬಿಜಾಪುರ	ಬಾಗಲಕೋಟೆ	
ವರ್ಷ	ವಿಭಾಗ	ವಿಭಾಗ	ಒಟ್ಟು
೧೯೮೩–೮೪	—	—	—
೧೯೮೪–೮೫	೯	೬	೧೫
೧೯೮೫–೮೬	೧೬	೭	೨೩
ಒಟ್ಟು	೨೫	೧೩	೩೮

ಆ) ಸೇತು ಬಂಧನ ಕಾರ್ಯಕ್ರಮದಲ್ಲಿ ೧೯೮೫–೮೬ನೇ ಸಾಲಿನಲ್ಲಿ ಬಿಜಾಪುರ ವಿಭಾಗದಲ್ಲಿ ೧೬ ಬಾಗಲಕೋಟ ವಿಭಾಗದಲ್ಲಿ ೭ ಸೇತುವೆಗಳ ನಿರ್ಮಾಣ ಆಗಿವೆ, ಮತ್ತು ಬಾಗಲಕೋಟಿ ವಿಭಾಗದಲ್ಲಿ ಮಾತ್ರ ೩ ಸೇತುವೆಗಳು ನಿರ್ಮಾಣ ಹಂತದಲ್ಲಿ ಇದ್ದವು.